ಪಿ.ಡಬ್ಲ್ಯೂ :1

ದಿನಾಂಕ :06-01-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಸಿ ಆರ್ ಬಿ ವಕೀಲರಿಂದಃ

ಕರಿಯಣ್ಣನಿಗೆ ಒಬ್ಬನೇ ಮಗ ಅವರ ಹೆಸರು ವೀರಭದ್ರಯ್ಯ . 1 ನೇಪ್ರತಿವಾದಿ ವೀರಭದ್ರಯ್ಯ ನವರ ಹೆಂಡತಿ . ನಾನು ವೀರಭದ್ರಯ್ಯ ನವರ ಮಗ. ವೀರಭದ್ರಯ್ಯ ನವರಿಗೆ 4 ಜನ ಮಕ್ಕಳು ಅವರುವುಗಳೆಂದರೆ ದೇವರಾಜು ಗುರುಮೂರ್ತಿ, ರಮೇಶ, ಚಂದ್ರಶೇಖರ, ಇವರಲ್ಲಿ ಚಂದ್ರಶೇಖರ ಜೀವಂತವಿಲ್ಲ . ಗುರುಮೂರ್ತಿ ಮತ್ತು ರಮೇಶ ಊರಿನಲ್ಲಿ ಇದ್ದಾರೆ . ಇವರುಗಳನ್ನು ನಾನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ . ದಾವಾ ಆಸ್ತಿ 3 ಎಕರೆ 37 ಗುಂಟೆ ಇದೆ . ಮೊದಲು ಇದು ಕರಿಯಣ್ಣ ನವರಿಗೆ ಸೇರಿತ್ತು . 3 ಎಕೆರ 37 ಗುಂಟೆ ಚಕ್ಕುಬಂದಿ ಪೂರ್ವಕ್ಕೆ ರಾಮಯ್ಯ , ಪಶ್ಚಿಮಕ್ಕೆ ಮೂಡಲಗಿರಿಯಯ್ಯ, ಉತ್ತರಕ್ಕೆ ಮಲ್ಲದಾಸಯ್ಯ , ದಕ್ಷಿಣಕ್ಕೆ ರಸ್ತೆ . ಅನುಸೂಯಮ್ಮನವರಿಗೆ 5 ಗುಂಟೆ ಮಾರಾಟ ಮಾಡಿದ್ದಾರೆ. ನಂತರ ವಿರುಪಾಕ್ಷಯ್ಯನವರಿಗೆ 5 ಗುಂಟೆ ಮಾರಾಟವಾಗಿದೆ . ವಿರುಪಾಕ್ಷಯ್ಯನವರಿಗೆ ನನ್ನ ತಾತ ಮೃತ ಪಟ್ಟ ನಂತರ ನನ್ನ ತಂದೆ ಮತ್ತು ಮಕ್ಕಳು ಸೇರಿ ಮಾರಾಟ ಮಾಡಿದ್ದಾರೆ ಎಂದರೆ ಸರಿ . 1979 ರಲ್ಲಿ ಅನುಸೂಯಮ್ಮನವರಿಗೆ ನೋಂದಾಯಿತು ಕ್ರಯಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ . ಆ ದಾಖಲೆ ನಿಪಿ -8 . ನಿಪಿ -8 ರಲ್ಲಿ 3 ಎಕರೆ 37 ಗುಂಟೆ ಪೈಕಿ 5 ಗುಂಟೆ ಮಾರಾಟ ಮಾಡಿದ್ದಾರೆ . ಒಟ್ಟು 1 ಎಕರೆ 38 ½ ಗುಂಟೆ ಎಂದು ತಪ್ಪಾಗಿ ನಮೂದು ಆಗಿದೆ . ಆ ತಪ್ಪಿನ ಬಗ್ಗೆ ನಾವು ತಿದ್ದುಪಡಿ ಪತ್ರ ಮಾಡಿಕೊಳ್ಳಲಿಲ್ಲ . ಸದರಿ 5 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ವೀರಭದ್ರಯ್ಯ ನವರ ಉಳಿದ ಜಮೀನು ಪತ್ರದಲ್ಲಿ ಕರಿಯಣ್ಣ ನವರ ಉಳಿದ ಜಮೀನು , ಪಶ್ಚಿಮಕ್ಕೆ ಮಹಮದ್ ಇಸಾಬ್ ಎಂದು ಬಂದಿದೆ ಅದು ತಪ್ಪಾಗಿ ಬಂದಿದೆ , ಉತ್ತರಕ್ಕೆ ಉಳಿದ ಜಮೀನು , ದಕ್ಷಿಣಕ್ಕೆ ರಸ್ತೆ .

ಮಹಮದ್ ಆಲಿಯವರು ಹೆಸರು ಚಕ್ಕುಬಂದಿಯಲ್ಲಿ ತಪ್ಪಾಗಿ ಬಂದಿದೆ ಅಂತ ನಾವು ತಿದ್ದುಪಡಿ ಮಾಡಿಕೊಂಡಿಲ್ಲ . ನಾನು ನನ್ನ ತಮ್ಮಂದಿರು ಮತ್ತು ನನ್ನ ತಂದೆಯವರು ಸೇರಿ ವೀರಪಾಕ್ಷಯ್ಯನವರಿಗೆ ಜಮೀನು ಮಾರಾಟ ಮಾಡಿದ್ದೇವೆ . ಆ ಖರೀದಿ ಪತ್ರದಲ್ಲಿ ನನ್ನ ವಯಸ್ಸು 25 ಎಂದು ಬರೆದಿದೆ ಎಂದರೆ ಸರಿ ಮತ್ತು 23 ವರ್ಷದ ಗುರುಮೂರ್ತಿ , 21 ವರ್ಷದ ರಮೇಶ ಹಾಗೂ 19 ವರ್ಷದ ಚಂದ್ರಶೇಖರ ಅಂತ ಬರೆದಿದೆ ಎಂದರೆ ಸರಿ. ಅಂದರೆ ನಾನು ಮತ್ತು ನನ್ನ ತಮ್ಮಂದಿರು ವಯಸ್ಕರು ಆಗಿದ್ದೆವು ಎಂದರೆ ಸರಿ . ಆ ಪತ್ರದಲ್ಲಿ 1 ಎಕರೆ 33 ½ ಗುಂಟೆ ಎಂದು ಬರೆಸಿದ್ದೇವೆ ಅದು ತಪ್ಪಾಗಿದೆ . 1 ಎಕರೆ 33 ½ ಗುಂಟೆ ಪೈಕಿ 5 ಗುಂಟೆ ಮಾರಾಟ ಮಾಡಿದ್ದೇವೆ ಎಂದು ಬರೆಸಿದ್ದೇವೆ ಎಂದರೆ ಸರಿ . ಆ ನಂತರ 1 ಎಕರೆ 28 ½ ಗುಂಟೆ ಉಳಿದಿದ್ದು ಎಂದರೆ ಸರಿ ಆದರೆ ಅದು ತಪ್ಪಾಗಿ ನಮೂದು ಆಗಿದೆ. ಆ ನಂತರ ಅದನ್ನು ಸೌಭಾಗ್ಯಮ್ಮ ನವರಿಗೆ ವೀರಪಾಕ್ಷಯ್ಯನವರು ಮಾರಾಟ ಮಾಡಿದ್ದಾರೆ ಎಂದರೆ ಸರಿ . ನನ್ನ ತಂದೆಯವರು ನನ್ನ ತಾತ ಮೃತ ಪಟ್ಟ ನಂತರ ಖಾತಾ ಪಹಣಿ ವರ್ಗಾವಣೆಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ . ಅದರ ಖಾತಾ ಪಹಣಿ ನಿಪಿ -14 ಹಾಜರುಪಡಿಸಿದ್ದೇವೆ ಎಂದರೆ ಸರಿ . ಖಾತಾ ಪಹಣಿ ಮಾಡಿಕೊಳ್ಳಲು ನನ್ನ ತಂದೆ 1 ಎಕರೆ 33 ½ ಗುಂಟೆಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ . ಅದು ತಪ್ಪಾಗಿ ಕೊಟ್ಟಿದ್ದಾರೆ . ಆ ಪ್ರಕಾರ ನನ್ನ ತಂದೆಯವರ ಹೆಸರಿಗೆ 1 ಎಕರೆ 33 ½ ಗುಂಟೆ ಖಾತಾ ಪಹಣಿ ಆಯಿತು ಎಂದರೆ ಸರಿ . ಅದು ಸರ್ವೆ ನಂ . 29 ರಲ್ಲಿ ಆಗಿದೆ . ಸರ್ವೆ ನಂ . 29 ರಲ್ಲಿ 3 ಎಕರೆ 27 ಗುಂಟೆ ಪೈಕಿ 3 ಪೋಡು ಆಗಿದೆ ಎಂದರೆ ಸರಿ . 29/1, 29/3 ಮತ್ತು 29/4 ಅಂದರೆ ಸರಿ . ಅದರಲ್ಲಿ ನಮ್ಮ ಹೆಸರು ಇಲ್ಲ ಎಂದು ಹೇಳುತ್ತಾರೆ . 29/1 ಅನುಸೂಯಮ್ಮನವರ ಹೆಸರಿಗೆ 1 ಎಕರೆ 33 ½ ಗುಂಟೆ ಪೋಡು ಆಗಿದೆ ಅದು ತಪ್ಪಾಗಿದೆ . ಅದೇ ರೀತಿ 29/3 ರಲ್ಲಿ ಕೆ. ಮಂಜುನಾಥ 5 ಗುಂಟೆ ನಮೂದು ಆಗಿದೆ ಎಂದರೆ ಸುಳ್ಳು ದಾಖಲೆ ಸೃಷ್ಟಿ ಮಾಡಿ ನಮೂದು ಆಗಿದೆ ಎಂದು ಹೇಳುತ್ತಾರೆ . ಅದೇ ರೀತಿ 29/4 ರಲ್ಲಿ ಜಯಮ್ಮ 1 ಎಕರೆ 33 ½ ಗುಂಟೆ ನಮೂದು ಆಗಿದೆ ಎಂದರೆ ಸುಳ್ಳು ದಾಖಲೆ ಸೃಷ್ಟಿ ಮಾಡಿ ನಮೂದು ಆಗಿದೆ ಎಂದು ಹೇಳುತ್ತಾರೆ . 29/1 ಇದರ ಬಗ್ಗೆ

ತಪ್ಪಾಗಿ ನಮೂದು ಆಗಿದೆ ಎಂದು ನಾನು ಅಪೀಲು ಹಾಕಿದ್ದೇನೆ ಅದನ್ನು ನನ್ನ ತಾಯಿ ಹಾಕಿದ್ದರು . ಅದಕ್ಕೆ ಸಂಬಂಧ ಪಟ್ಟ ದಾಖಲೆಗಳನ್ನು ನಾನು ಹಾಜರುಪಡಿಸಿದ್ದೇನೆ . 29/3 ಮತುತ 29/4 ತಪ್ಪಾಗಿ ನಮೂದು ಆಗಿದೆ ಎಂದು ಕಂದಾಯ ಅಥವಾ ಸರ್ವೆ ಇಲಾಖೆಗೆ ಅಪೀಲು ಸಲ್ಲಿಸಿಲ್ಲ . 29/3 ಈಗಲೂ ಕೂಡ ಮಂಜುನಾಥನವರ ಹೆಂಡತಿ 2 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಹೌದು . ಅದೇ 29/4 3 ನೇ ಪ್ರತಿವಾದಿ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸರಿ . ಅದು ತಪ್ಪಾಗಿ ನಮೂದು ಆಗಿದೆ . ನಿಪಿ -17 ರಲ್ಲಿ 3 ಎಕರೆ 37 ಗುಂಟೆ ಕರಿಯಣ್ಣ ಬಿನ್ ಬಡಕಯ್ಯ ಅಂತ ಇದೆ ಎಂದರೆ ಸರಿ . ಅದರಲ್ಲಿ 5 ಗುಂಟೆ ಅನುಸೂಯಮ್ಮನವರ ಹೆಸರಿನಲ್ಲಿ ಇದೆ ಎಂದರೆ ಸರಿ . ನಿಪಿ -18 ರಲ್ಲಿ 1 ಎಕರೆ 38 ½ ಕಡಿಮೆ ಮಾಡಿ ಉಳಿಕೆ 1 ಎಕರೆ 38 ½ ಗುಂಟೆ ಮಾತ್ರ ತೋರಿಸಿದ್ದಾರೆ ಎಂದರೆ ಸರಿ . 1986-87 ರಿಂದ ಇದೇ ರೀತಿ ಇದೆ ಎಂದರೆ ಸರಿ . ನಿಪಿ -17 ರಿಂದ 20 ರಲ್ಲಿ 1 ಎಕರೆ 38 ½ ಗುಂಟೆ ಕಡಿಮೆ ಮಾಡಿ ಉಳಿಕೆ 1 ಎಕರೆ 38 ½ ಗುಂಟೆ ತೋರಿಸಿದ್ದಾರೆ ಎಂದರೆ ಸರಿ ಅದು 3 ಎಕರೆ 37 ಗುಂಟೆ ಹಾಗೆ ತೋರಿಸಿದ್ದಾರೆ . ನಿಪಿ -24 ರಲ್ಲಿ ವೆಂಕಟಾಚಲಮ್ಮ ಅಂದರೆ 1 ನೇ ವಾದಿ ಹೆಸರಿಗೆ 1 ಎಕರೆ 28 ½ ಗುಂಟೆ ಇದೆ ಎಂದರೆ ಸರಿ . 2020 ರಲ್ಲಿ ಸರ್ವೆ ನಂ 29/1 ರಲ್ಲಿ ತತ್ಕಾಲ್ ಪೋಡಿಗೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ . ಕ್ರಯ ಪತ್ರ ನೋಂದಣಿ ಆಗುವಾಗ ಕೊಟ್ಟ ದಾಖಲೆಗಳು ಉಪ ನೋಂದಣಿ ಕಛೇರಿಯಲ್ಲಿ ಇರುತ್ತವೆ ತಹಶೀಲ್ದಾರ್ ರವರ ಕಛೇರಿಯಲ್ಲಿ ಇರುವುದಿಲ್ಲ ಎಂದರೆ 1 ಪ್ರತಿಯನ್ನು ತಹಶೀಲ್ದಾರ್ ಕಛೇರಿಯಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ಹೇಳುತ್ತಾರೆ . ನಿಪಿ -12 ಇ ಸಿ ಪ್ರತಿ ಹಾಜರುಪಡಿಸಿದ್ದೇನೆ ಎಂದರೆ ಸರಿ . ನಾನು ಸಂಬಂಧಪಡದ ದಾಖಲೆಗಳನ್ನು ಮಾಹಿತಿ ಹಕ್ಕಿನಲ್ಲಿ ಕೇಳಿದ್ದೇನೆ ಎಂದರೆ ಸರಿಯಲ್ಲ . 3 ಎಕರೆ 37 ಗುಂಟೆಯಲ್ಲಿ ನನ್ನ ತಾತ , ನನ್ನ ತಂದೆ ಮತ್ತು ನಾವುಗಳು ಸೇರಿ 10 ಗುಂಟೆ ಮಾರಾಟ ಮಾಡಿದ್ದೇವೆ ಎಂದರೆ ಸರಿ . ನನ್ನ ತಾತನಿಗೆ ಆಸ್ತಿ ಕ್ರಯ ಪತ್ರದ ಮುಖಾಂತರ ಬಂದಿದೆ . ಅನುಸೂಯಮ್ಮನವರಿಗೆ 5 ಗುಂಟೆ ಮಾರಾಟ ಮೊದಲು ನನ್ನ ತಾತ 1 ಎಕರೆ 38 ಗುಂಟೆ ಮಹಮದ್ ಅಲಿ ಸಾಬ್ ಗೆ ದಿಃ 01-06-1959 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು . ಆ ರೀತಿ ಮಾರಾಟ ಮಾಡಿ ಅದರ

ಸ್ವಾದೀನವನ್ನು ಮಹಮದ್ ಅಲಿ ಸಾಬ್ ರವರಿಗೆ ನನ್ನ ತಾತ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಈ ಆಸ್ತಿ ಸರ್ವೆ ನಂ 29 ರ ಪಶ್ಚಿಮ ಭಾಗದ ಆಸ್ತಿ ಎಂದರೆ ಸರಿಯಲ್ಲ .1959 ರಲ್ಲಿ ನಾನು ಹುಟ್ಟಿರಲಿಲ್ಲ . ಆ ಕಾರಣ ನನಗೆ ಆ ಬಗ್ಗೆ ವ್ಯಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ ಆದರೆ ನನ್ನತಾತ ಮತ್ತು ನನ್ನ ತಂದೆ ಜಮೀನು ಮಾರಾಟ ಮಾಡಿಲ್ಲ ಎಂದು ಹೇಳಿದ್ದಾರೆ . ಮಹಮದ್ ಅಲಿ ಸಾಬ್ ಮಾರಾಟ ಮಾಡಿದ ಚಕ್ಕುಬಂದಿ ಪೂರ್ವಕ್ಕೆ ಕರಿಯಣ್ಣ ಉಳಿದ ಜಮೀನು, ಪಶ್ಚಿಮಕ್ಕೆ ನಂಜಪ್ಪನವರ ಜಮೀನು , ಉತ್ತರಕ್ಕೆ ಮಲ್ಲದಾಸಯ್ಯ ನವರ ಜಮೀನು , ದಕ್ಷಿಣಕ್ಕೆ ರಸ್ತೆ ಎಂದರೆ ಸುಳ್ಳು . ಈ ಚಕ್ಕುಬಂದಿಯಲ್ಲಿ ಖರೀದಿ ಮಾಡಿದಾಗಿನಿಂದ ಮಹಮದ್ ಅಲಿ ಸಾಬ್ ಸ್ವಾದೀನದಲ್ಲಿ ಇದ್ದರು ಬೆಳೆ ಬೆಳೆಯುತ್ತಿದ್ದರು ಎಂದರೆ ಸುಳ್ಳು . ಕ್ರಯ ಪತ್ರದ ಆಧಾರದಲ್ಲಿ ಮಹಮದ್ ಅಲಿ ಸಾಬ್ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು . ಮಹಮದ್ ಅಲಿ ಸಾಬ್ ರವರು ಪೋಡಿ ಮಾಡಲು ಅರ್ಜಿ ಕೊಟ್ಟಿದ್ದರು ಎಂದರೆ ಸುಳ್ಳು . ಅವರು ಕೊಟ್ಟ ಅರ್ಜಿ ಆಧಾರದಲ್ಲಿ ಅದು 29/3 ಆಯಿತು ಎಂದರೆ ಸುಳ್ಳು . ಮಹಮದ್ ಅಲಿ ಸಾಬ್ ರವರಿಗೆ 3 ಜನ ಗಂಡು ಮಕ್ಕಳು ಅವರಗಳೆಂದರ ಗೌಸ್‌ಪೀರ್ , ಪೀರ್ ಭಾಷಾ ಮತುತಬಹದ್ದೂರ್ ಎಂದರೆ ಸರಿಯಲ್ಲ . ಮಹಮದ್ ಅಲಿ ಸಾಬ್ ಮೃತ ಪಟ್ಟ ನಂತರ ಅವರು ಮೂರು ಜನ ಗಂಡು ಮಕ್ಕಳು ಈ ಆಸ್ತಿಯ ಸ್ವಾದೀನದಲ್ಲಿ ಇದ್ದರು ಎಂದರೆ ಸರಿಯಲ್ಲ . ಮಹಮದ್ ಅಲಿ ಸಾಬ್‌ರವರ ಮಗ ಗೌಸ್‌ಪೀರ್ 1 ಎಕರೆ 38 ಗುಂಟೆ ಪೈಕಿ 35 ಗುಂಟೆ ಜಮೀನನ್ನು ದಿಃ 28-10-1991 ರಲ್ಲಿ 3 ನೇ ಪ್ರತಿವಾದಿಯವರು ಗಂಡ ಕೆ. ಕೃಷ್ಣಮೂರ್ತಿ ರವರಿಗೆ ನೋಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿದ್ದರು ಎಂದರೆ ಸುಳ್ಳು . ಆ ಕ್ರಯಪತ್ರದ ಆಧಾರದಲ್ಲಿ ಕೆ. ಕೃಷ್ಣಮೂರ್ತಿ ರವರು ಸ್ವಾದೀನ ಅನುಭವ ಹೊಂದಿ ಬೆಳೆಯನ್ನು ಬೆಳೆಯುತ್ತಿದ್ದರು ಎಂದರೆ ಸುಳ್ಳು . ನಂತರ ಕೆ. ಕೃಷ್ಣಮೂರ್ತಿ ತಮ್ಮ ಹೆಸರಿಗೆ ಖಾತೆ ಪಹಣಿ ಮಾಡಿಕೊಂಡರು ಎಂದರೆ ಸರಿಯಲ್ಲ . ನಂತರ 38 ½ ಗುಂಟೆಯನ್ನು ಪೀರ್ ಭಾಷಾ ಮತ್ತು ಬಹದ್ದೂರ್ ರವರು ದಿಃ 20-02-1992

ರಂದು ಕ್ರಯ ಪತ್ರದ ಮುಖಾಂತರ ಕೆ. ಕೃಷ್ಣಮೂರ್ತಿ ರವರಿಗೆ ಮಾರಾಟ ಮಾಡಿದರು ಎಂದರೆ ಸುಳ್ಳು . ಆ ಕ್ರಯಪತ್ರದ ಆಧಾರದಲ್ಲಿ ಕೆ. ಕೃಷ್ಣಮೂರ್ತಿ ಸ್ವಾದೀನ ಅನುಭವ ಹೊಂದಿ ಬೆಳೆಯನ್ನು ಬೆಳೆಯುತ್ತಿದ್ದರು ಎಂದರೆ ಸುಳ್ಳು . ಅದೇ ರೀತಿ ಖಾತಾ ಪಹಣಿಗಳು ಅವರ ಹೆಸರಿಗೆ ವರ್ಗಾವಣೆ ಆಯಿತು ಎಂದರೆ ಸುಳ್ಳು . ಈ ರೀತಿ ಕೆ. ಕೃಷ್ಣಮೂರ್ತಿ ರವರು ಮಹಮದ್ ಅಲಿ ಸಾಬ್ ರವರ ಮಕ್ಕಳಿಂದ 1 ಎಕರೆ 33 ½ ಗುಂಟೆ ಖರೀದಿ ಮಾಡಿದರು ಎಂದರೆ ಸುಳ್ಳು . 29/3 ರಲ್ಲಿ ಈ ಮಾರಾಟ ಆದ ನಂತರ ಮಹಮದ್ ಅಲಿ ಸಾಬ್ ಮಕ್ಕಳ ಬಳಿ ಕೇವಲ 5 ಗುಂಟೆ ಉಳಿದಿದ್ದು ಎಂದರೆ ಸುಳ್ಳು ಅದು ಪಶ್ಚಿಮ - ದಕ್ಷಿಣ ಭಾಗದ ಜಮೀನು ಎಂದರೆ ಸುಳ್ಳು . ಆ 5 ಗುಂಟೆ ನಂತರ ರಸ್ತೆ ಇದೆ ಎಂದರೆ ಸರಿಯಲ್ಲ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

sd/-
(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫಸಿ, ಗುಬ್ಬಿ .